# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1115** |
| 2 | ಸದಸ್ಯರ ಹೆಸರು | : | **ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)** |
| 3 | ಉತ್ತರಿಸಬೇಕಾದ ದಿನಾಂಕ | : | **25.07.2024** |
| 4 | ಉತ್ತರಿಸುವ ಸಚಿವರು | : | **ಗೃಹ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಗೃಹ ಇಲಾಖೆಯಲ್ಲಿನ ಯಾವ ಯಾವ ಹುದ್ದೆಗಳ ಮತ್ತು ಎಷ್ಟು ಹುದ್ದೆಗಳ ನೇಮಕಾತಿಗಾಗಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿದೆ;</td><td>
ಗೃಹ ಇಲಾಖೆಯ ಈ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುತ್ತದೆ:-<br>
<u>ಪೊಲೀಸ್ ಇಲಾಖೆ</u>
<table>
<tr><th>ಕ್ರ ಸಂ</th><th>ಹುದ್ದೆ</th><th>ವರ್ಷ</th><th>ಹುದ್ದೆಗಳ ಸಂಖ್ಯೆ</th><th>ಪ್ರಸ್ತುತ ಹಂತ</th></tr>
<tr><td>1</td><td>ಡಿವೈಎಸ್‌ಪಿ(ಸಿವಿಲ್)</td><td>2023-24 ಮತ್ತು 2024-25</td><td>10</td><td>ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.</td></tr>
<tr><td>2</td><td>ಪಿಸಿ(ಸಿವಿಲ್)</td><td>2021-22</td><td>4000</td><td>ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.</td></tr>
<tr><td>3</td><td>ಫಾಲೋಯರ್ಸ್ (ಕೆಎಸ್‌ಆರ್‌ಪಿ)</td><td>2021-22</td><td>250</td><td>ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.</td></tr>
<tr><td>4</td><td>ಪಿಸಿ (ಸಿವಿಲ್)</td><td>2022-23</td><td>3000</td><td>ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.</td></tr>
<tr><td>5</td><td>ಎಪಿಸಿ (ಸಿಎಆರ್/ಡಿಎಆರ್)</td><td>2022-23</td><td>1500</td><td>ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.</td></tr>
<tr><td>6</td><td>ಎಪಿಸಿ (ಸಿಎಆರ್/ಡಿಎಆರ್)</td><td>2023-24</td><td>2000</td><td>ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ</td></tr>
<tr><td>7</td><td>ಸ್ಪೆ.ಆರ್‌ಪಿಸಿ (ಕೆಎಸ್‌ಆರ್‌ಪಿ)</td><td>2023-24</td><td>1500</td><td>ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ</td></tr>
<tr><td>8</td><td>ಪಿಎಸ್‌ಐ</td><td>2022-23</td><td>300</td><td>ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ</td></tr>
<tr><td>9</td><td>ಪಿಎಸ್‌ಐ</td><td>2023-24</td><td>300</td><td>ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ</td></tr>
<tr><td>10</td><td>ಡಿಎಸ್‌ಐ</td><td>2024-25</td><td>15</td><td>ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ</td></tr>
</table>
<u>ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ</u><br>
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಗ್ರೂಪ್-ಸಿ ವೃಂದದ 07 ಪ್ರಥಮ ದರ್ಜೆ ಸಹಾಯಕರು, 07 ದ್ವಿತೀಯ ದರ್ಜೆ ಸಹಾಯಕರು ಮತ್ತು 43 ಶೀಘ್ರಲಿಪಿಗಾರರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದೆ.<br>
<u>ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ</u><br>
ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯಲ್ಲಿ ಖಾಲಿಯಿರುವ 03
</td></tr>
</table>

| | | |
|---|---|---|
| | | ಸಹಾಯಕ ಅಧೀಕ್ಷಕರುಗಳ ಹುದ್ದೆ, 197 ವೀಕ್ಷಕರ ಹುದ್ದೆ ಹಾಗೂ 22 ದ್ವಿತೀಯ ದರ್ಜೆ ಬೋಧಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮೋದನೆಯನ್ನು ನೀಡಲಾಗಿರುತ್ತದೆ.<br><br>**<u>ಪೊಲೀಸ್ ಸಹಾಯಕ ಸೇವೆಗಳು(ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇಲಾಖೆ, ಗೃಹ ರಕ್ಷಕ ಮತ್ತು ಪೌರ ರಕ್ಷಣಾ ಇಲಾಖೆ ಮತ್ತು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ)</u>**<br>ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇಲಾಖೆಯಲ್ಲಿ 2020ನೇ ಸಾಲಿನಲ್ಲಿ ಕೆಳಕಂಡ ಒಟ್ಟು 1567 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 19 ವೆಚ್ಚ–11/2020(ಇ), ದಿನಾಂಕ 03.06.2020 ಮತ್ತು 08.06.2020 ರಲ್ಲಿ ನೀಡಿರುವ ಸಹಮತಿಯನ್ವಯ ಆದೇಶ ಸಂಖ್ಯೆ: ಒಇ 114 ಕಾಸೇ 2020, ದಿನಾಂಕ 10.06.2020 ರಲ್ಲಿ ಅನುಮೋದನೆ ನೀಡಿರುತ್ತದೆ:–<br>1. ಅಗ್ನಿಶಾಮಕ ಠಾಣಾಧಿಕಾರಿ–36<br>2. ಚಾಲಕ ತಂತ್ರಜ್ಞ–82<br>3. ಅಗ್ನಿಶಾಮಕ ಚಾಲಕ–227<br>4. ಅಗ್ನಿಶಾಮಕ–1222<br><br>ಗೃಹ ರಕ್ಷಕ ಮತ್ತು ಪೌರ ರಕ್ಷಣಾ ಇಲಾಖೆಯಲ್ಲಿ ನೇರ ನೇಮಕಾತಿಗೆ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವುದಿಲ್ಲ.<br><br>ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿನ ನೇರ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ದಿನಾಂಕ 27.03.2018 ರಂದು ಅನುಮೋದನೆಯಾದ ಹುದ್ದೆಗಳ ವಿವರ ಕೆಳಕಂಡಂತಿದೆ:–<br>1. ಶೀಘ್ರಲಿಪಿಗಾರರು–01<br>2. ದ್ವಿತೀಯ ದರ್ಜೆ ಸಹಾಯಕರು–14<br>ಕಲ್ಯಾಣ ಸಂಘಟಕರು–14 |
| ಆ | 545 ಪಿಎಸ್ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ವಿಳಂಬವಾಗಲು ಕಾರಣವೇನು; (ವಿವರ ನೀಡುವುದು) | ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) 545 ಹುದ್ದೆಗಳಿಗೆ ಸಂಬಂಧಿಸಿದಂತೆ ದಿನಾಂಕ: 03.10.2021 ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿದ್ದು, ಸದರಿ ಲಿಖಿತ ಪರೀಕ್ಷೆಯ ನೇಮಕಾತಿಯಲ್ಲಿ ಅಕ್ರಮ ಕಂಡು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಒಇ 73 ಪಿಇಐ 2022 ದಿನಾಂಕ: 29.04.2022 ರಲ್ಲಿ ದಿನಾಂಕ: 03.10.2021 ರಂದು ನಡೆಸಲಾಗಿದ್ದ ಲಿಖಿತ ಪರೀಕ್ಷೆಯನ್ನು ರದ್ದುಗೊಳಿಸಿ, ಹೊಸದಾಗಿ ಮರು ಲಿಖಿತ ಪರೀಕ್ಷೆಯನ್ನು ನಡೆಸಲು ಆದೇಶಿಸಲಾಗಿರುತ್ತದೆ. ಸದರಿ ಅಕ್ರಮದ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ವಹಿಸಲಾಗಿರುತ್ತದೆ. ನಂತರ ಸರ್ಕಾರದ ಆದೇಶ ಸಂಖ್ಯೆ: ಒಇ 73 ಪಿಇಐ 2022 ದಿನಾಂಕ: 13.11.2023 ರಲ್ಲಿ ಪಿ.ಎಸ್.ಐ. (ಸಿವಿಲ್) 545 ಖಾಲಿ ಹುದ್ದೆಗಳ ನೇರ ನೇಮಕಾತಿಯ ಮರು ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲು ಆದೇಶಿಸಲಾಗಿರುತ್ತದೆ. ಅದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ದಿನಾಂಕ: 23.01.2024 ರಂದು ಮರು ಲಿಖಿತ ಪರೀಕ್ಷೆಯನ್ನು ನಡೆಸಲಾಗಿದ್ದು, ಸದರಿ ಲಿಖಿತ ಪರೀಕ್ಷೆಯ ಅಂತಿಮ ಅಂಕಪಟ್ಟಿಯನ್ನು ದಿನಾಂಕ: 28.03.2024 ರಂದು ಕೆ.ಇ.ಎ. ವತಿಯಿಂದ ಪ್ರಕಟಿಸಲಾಗಿರುತ್ತದೆ.<br><br>ಪಿ.ಎಸ್.ಐ. (ಸಿವಿಲ್) 545 ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯು ಪ್ರಕಟಿಸುವುದು ಬಾಕಿ ಇರುತ್ತದೆ. |
| ಇ | ಯಾವ ಕಾಲಮಿತಿಯಲ್ಲಿ ಈ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗುವುದು; (ಮಾಹಿತಿ ನೀಡುವುದು) | |
| | | ಕಲ್ಯಾಣ ಕರ್ನಾಟಕ ಮತ್ತು ಮಿಕ್ಕುಳಿದ ವೃಂದದ ಆಯ್ಕೆಪಟ್ಟಿ ತಯಾರಿಸುವ |

| | | |
|---|---|---|
| | | ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/03/ಹೈಕಕೋ/20219 ದಿನಾಂಕ: 01.02.2023 ಅನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 1970/2023 ರಲ್ಲಿ ದಿನಾಂಕ: 01.01.2024 ರಂದು ನೀಡಿರುವ ಆದೇಶದಲ್ಲಿ ರದ್ದುಪಡಿಸಿರುತ್ತದೆ. ಈ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗಿದೆ. ಹೀಗಾಗಿ, ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿದೆ. |
| ಈ | ನೇಮಕಾತಿ ವಿಳಂಬದಿಂದಾಗಿ ರಾಜ್ಯದಲ್ಲಿ ಕಾನೂನು ಮೇಲೆ ಪರಿಣಾಮ ಬೀರಿ ಅಪರಾಧ ಪ್ರಕರಣಗಳು ಹೆಚ್ಚಾಗುವುದಿಲ್ಲವೆ; ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಪ್ರಸ್ತುತ ಲಭ್ಯವಿರುವ ಸಿಬ್ಬಂದಿಗಳನ್ನು ದೈನಂದಿನ ಕಾರ್ಯ ನಿರ್ವಹಣೆ ಮತ್ತು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ/ಅಪರಾಧ/ಸಂಚಾರ ನಿರ್ವಹಣೆಗೆ ಕರ್ತವ್ಯಗಳಿಗೆ ಸಮರ್ಪಕವಾಗಿ ನಿಯೋಜಿಸಲಾಗುತ್ತಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯನ್ನು ಸಮರ್ಥವಾಗಿ ನಿರ್ವಹಿಸಲಾಗುತ್ತಿದೆ. |

ಸಂಖ್ಯೆ: ಒಇ 235 ಪಿಇಜಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು